ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹರಿಹರ

**CC-27/2016**

**CW-72**
**PW-55**

**ಹೆಸರುಃ** ಶರಣಪ್ಪ.

**ತಂದೆಃ** ನಂದೆಪ್ಪ.

**ವಯಸ್ಸುಃ** **70** ವರ್ಷ.

**ಕೆಲಸಃ** ವ್ಯವಸಾಯ.

**ವಾಸಃ** ಗೋವಿನಹಾಳು ಗ್ರಾಮ, ಹರಿಹರ .

**ಇಂದು ದಿನಾಂಕ:05-04-2025** ರಂದು ಸಾಕ್ಷಿಯನ್ನು **ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆಃ ಸ.ಸ.ಅ ರವರಿಂದ ಅಭಿಯೊಜನೆಯವರ ಪರಃ

ಹಾಜರು ಇರುವ ಆರೋಪಿಯನ್ನು ಈ ಹಿಂದೆ ನೋಡಿದ್ದೇನೆ. ಆತನ ಪರಿಚಯ ಇದೆ. 2010 ರಲ್ಲಿ ಆರೋಪಿಗೆ ಭತ್ತ ಕೊಟ್ಟಿದ್ದೆನು. 196 ಚೀಲ ಭತ್ತ ಕೊಟ್ಟಿದ್ದೆನು. ಆತ ತಿಂಗಳೊಳಗೆ ಹಣ ಕೊಡುವುದಾಗಿ ಹೇಳಿದ್ದನು. ಪ್ರತಿ ಕ್ವಿಂಟಲ್ ಗೆ ರೂ.1,550 ದರ ಇತ್ತು. ನನ್ನದು 147 ಕ್ವಿಂಟಲ್ ಇತ್ತು. ಸುಮಾರು ರೂ.2,31,000/- ಸಾವಿರದ ಮೌಲ್ಯದ ಭತ್ತ ಕೊಟ್ಟಿದ್ದೆನು. ಒಂದು ತಿಂಗಳ ನಂತರ ಆರೋಪಿಗೆ ಹಣ ಕೇಳಲು ಹೋದಾಗ ಆತ ಸಿಗಲಿಲ್ಲ. ಆರೋಪಿ ಊರು ಬಿಟ್ಟು ಹೋಗಿದ್ದಾನೆ ಎಂದು ಗೊತ್ತಾಯಿತು. ಆರೋಪಿ ಸಿಗದೇ ಇದ್ದಾಗ ಪಿರ್ಯಾದಿಕೊಟ್ಟೆನು. ನಾನು ಪೋಲೀಸರಿಗೆ ನನಗೆ ಸಂಬಂಧಿಸಿದ 2 ಪಹಣಿಗಳನ್ನು ಕೊಟ್ಟಿನು. ಸಾಕ್ಷಿಗೆ ಸಂಬಂಧಿಸಿದ ಪಹಣಿಗಳನ್ನು ನಿ.ಪಿ-55 ಮತ್ತು 56 ಎಂದು ಗುರುತಿಸಲಾಯಿತು.

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಕೇಳಿದ್ದು, ಸಕಾರಣ ಇಲ್ಲದೇ ಸಮಯಕೇಳಿದ ಕಾರಣ, ಅವರ ಮನವಿಯನ್ನು ತಿರಸ್ಕರಿಸಿ ಅವರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹರಿಹರ.**